# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. CE/PRED ಪತ್ರಸಂಖ್ಯೆ: CE/PRED/RWS-1TA:1/AE:6/11717 2012-13.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ SLEC ಸಭಾನಡವಳಿ ದಿನಾಂಕ: 15.3.2013
3. CE/PRED ಪತ್ರ ಸಂಖ್ಯೆ: CE/PRED / RWS/1TA:1/AE6/11717 2012-13, ದಿನಾಂಕ: 6.5.2013

ಪೀಠಿಕೆ:

ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ತಲಾ ದಿನಂಪ್ರತಿ **40** ಲೀಟರ್‌ಗಿಂತ ಕಡಿಮೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗುತ್ತಿದ್ದು, ನೀರಿನ ಗುಣಮಟ್ಟದ ಸಮಸ್ಯೆಯಿದ್ದು 181 ಗ್ರಾಮ / ಜನವಸತಿಗಳಲ್ಲಿ ಅಧಿಕ ಫ್ಲೋರೈಡ್ ಮತ್ತು ನೈಟ್ರೇಟ್ ಸಮಸ್ಯೆಯಿರುವುದು ಕಂಡು ಬಂದಿದೆ. ಇದು ಗ್ರಾಮೀಣ ಜನರ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರಿದೆ. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಮೊಕದ್ದಮೆ ಸಂಖ್ಯೆ: 2421 SM 457/08, ದಿ:29.09.2009ರಲ್ಲಿ ಸದರಿ ಅರಸೀಕೆರೆ ತಾಲ್ಲೂಕಿನಲ್ಲಿನ ಸಮಸ್ಯಾತ್ಮಕ ಜನವಸತಿಗಳಿಗೆ ಶಾಶ್ವತ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಆದೇಶ ನೀಡಿದೆ.

2. ಈ ಕುರಿತಂತೆ, **2007–08ರ** ಪ್ರಾಥಮಿಕ ಸಮೀಕ್ಷಾ ವರದಿ ಹಾಗೂ ಈಗಾಗಲೇ ಯಗಚಿ ಜಲಮೂಲ ಆಧಾರದ ಮೇಲೆ ದಿ:19/10/2010ರಲ್ಲಿ 2007–08ರ ದರ ಪಟ್ಟಿ ಆಧರಿಸಿ ಉದ್ದೇಶಿತ ಬಹುಗ್ರಾಮ ಯೋಜನೆಯ ಕಾಮಗಾರಿಯನ್ನು ಅನುಷ್ಠಾನಗೊಳಿಸಲು **ರೂ.86.85ಕೋಟಿ**ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಆರ್ಥಿಕ ಮತ್ತು ತಾಂತ್ರಿಕ ಕಾರ್ಯಾಸಿಂಧುತ್ವ ಇರುವ ಇಂತಹ ಬಹುಗ್ರಾಮ ಯೋಜನೆಗಳನ್ನು **DBOT** ಆಧಾರದ ಮೇಲೆ ಅನುಷ್ಠಾನಗೊಳಿಸಲು, ರಾಜ್ಯ ಮಟ್ಟದ ಯೋಜನೆಗಳ ಮಂಜೂರಾತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿಧಿವಿಧಾನಗಳ ಷರತ್ತುಗಳನ್ನು **ದಿ:28.5.2012**ರಲ್ಲಿ ಹೊರಡಿಸಲಾಗಿದೆ.

3. ಈ ಯೋಜನೆ ಕುರಿತಂತೆ 2 ಬಾರಿ ಟೆಂಡರ್ ಪ್ರಕಟಣೆ ಹೊರಡಿಸಿದ್ದು ಯಾವುದೇ ಬಿಡ್‌ದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದಿಲ್ಲ. ಇದನ್ನು ಪರಿಶೀಲಿಸಿ, 100% ಸರ್ಕಾರಿ ಬಂಡವಾಳದ ಮೇಲೆ **DBOT** ಪದ್ಧತಿಯಲ್ಲಿ ಟೆಂಡರ್ ಕರೆಯಲು ಅನುಮತಿ ನೀಡಲಾಗಿದೆ. ಈ ಸಂಬಂಧ **E-procurement** ಮುಖೇನ E-tendering ಮತ್ತು ಜಿಲ್ಲಾ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಈ ಬಹುಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ॥ **JITF, Water Infrastructure Ltd, New Delhi,** ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಿದ್ದು, ರಾಜ್ಯಮಟ್ಟದ ತಾಂತ್ರಿಕ ಸಮಿತಿ ಪರಿಶೀಲಿಸಿ ಒಪ್ಪಿದೆ.

4. **CE/PRED**ರವರು **ದಿ:31.01.2013**ರಲ್ಲಿ ಸಲ್ಲಿಸಿರುವ ಮೆ॥**JITF**ರವರ ಪ್ರಸ್ತಾವನೆ ಪರಿಶೀಲಿಸಲಾಗಿ, ಹಿಂದೆ ಪ್ರಸ್ತಾಪಿಸಲಾಗಿದ್ದ ಯಗಚಿ ಜಲಾಶಯ- ಜಲಮೂಲ ಸೂಕ್ತವಲ್ಲದ ಕಾರಣ, ಹೇಮಾವತಿ ಗೋರೂರು ಜಲಾಶಯ ಹಾಗೂ ಕಾಮಸಮುದ್ರ ಕೆರೆ ಜಲಮೂಲದಿಂದ ಕುಡಿಯುವ ನೀರಿನ ಬಾಬ್ತಿಗಾಗಿ ಕಾಯ್ದಿರಿಸಿದ ನೀರಿನ ಹಂಚಿಕೆ ವತಿಯಿಂದ ಈ ಬೇಡಿಕೆ ಪೂರೈಸಲು ನೀರಿನ ಲಭ್ಯತೆ ಖಾತ್ರಿಯಾಗಿದೆ. ಆದ್ದರಿಂದ **2012–13ರ** ಚಾಲ್ತಿ ದರಗಳೊಂದಿಗೆ ಸದರಿ ಸಂಸ್ಥೆಯ ಬಿಡ್ ಪರಿಶೀಲಿಸಿ, **5** ವರ್ಷಗಳ **O&M** ಸೇರಿದಂತೆ ಸದರಿ ಪ್ರಸ್ತಾಪವನ್ನು ಶಿಫಾರಸ್ಸು ಮಾಡಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

......2

ಈ ಕುರಿತು ರೂ.171ಕೋಟಿ ಮೊತ್ತದ DBOT ಪ್ರಸ್ತಾವನೆಯನ್ನು ತಜ್ಞರೊಂದಿಗೆ ಸಮಾಲೋಚಿಸಿ, ರೂ.130.50ಕೋಟಿಯಲ್ಲಿ ಉದ್ದೇಶಿತ DBOT ಯೋಜನಾ ಕಾಮಗಾರಿಗಳನ್ನು 100% ಸರ್ಕಾರಿ ಬಂಡವಾಳದಲ್ಲಿ ಅನುಷ್ಠಾನಗೊಳಿಸಲು ಹಾಗೂ ರೂ.20ಕೋಟಿ ಅಂದಾಜು ಮೊತ್ತದಲ್ಲಿ 5 ವರ್ಷಗಳ ಸಂಪೂರ್ಣ O&M ವ್ಯವಸ್ಥೆ ಮಾಡಿಸಲು ಸರ್ಕಾರದ ಅನುಮೋದನೆ ಕೋರಲಾಗಿದೆ.

5. ಈ ಯೋಜನೆಯ ಕುಡಿಯುವ ನೀರಿನ ಕಾಮಗಾರಿಗಳನ್ನು ರೂ.150.50ಕೋಟಿ ಅಂದಾಜಿನಲ್ಲಿ DBOT ಆಧಾರದ ಮೇಲೆ ಅನುಷ್ಠಾನಗೊಳಿಸಿ 5 ವರ್ಷ O&M ವ್ಯವಸ್ಥೆ ನೋಡಿಕೊಳ್ಳುವುದು ಸದರಿ ಗುತ್ತಿಗೆ ಸಂಸ್ಥೆಯ ಜವಾಬ್ದಾರಿಯಾಗುತ್ತದೆ. ಈ ಅಂದಾಜು ಮೊತ್ತವನ್ನು 2011-12ರ ದರಪಟ್ಟಿ ಆಧಾರದ ಮೇಲೆ ಪರಿಗಣಿಸಿದಾಗ ಟೆಂಡರ್ ಪ್ರೀಮಿಯಂ 3.22% ಇರುತ್ತದೆ. ಈ ಯೋಜನೆಯನ್ನು 2032ರ ಪ್ರಾಕ್ಷೇಪಿತ 4.23ಲಕ್ಷ ಜನತೆಗೆ ಅನುಕೂಲವಾಗುವಂತೆ ರೂಪಿಸಲಾಗಿದೆ. ಇದರಲ್ಲಿ ತಲಾ ವೆಚ್ಚ ರೂ.3555/- ಆಗುವುದೆಂದು ಅಂದಾಜಿಸಲಾಗಿದೆ. ಈ MVS ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚ ಪ್ರತಿ ಕಿಲೋ ಲೀಟರ್‌ಗೆ ರೂ.9.20/- ಯೆಂದು ಅಂದಾಜಿಸಲಾಗಿದೆ.

6. ಈ ಪ್ರಸ್ತಾವನೆ ಕುರಿತಂತೆ ಮೆ॥ JITFರವರು ಈಗಾಗಲೇ ಭಾರತದ ಇತರೆ ರಾಜ್ಯಗಳಲ್ಲಿ DBOT ಆಧಾರದ ಮೇಲೆ ಅನುಷ್ಠಾನಗೊಳಿಸಿರುವ ಸಂಬಂಧದ ವಿಧಿವಿಧಾನ ಹಾಗೂ ಸದರಿ ಯೋಜನೆಗಳ ಮಾಹಿತಿ ಪಡೆದು, ಛತ್ತೀಸ್‌ಘಡ ರಾಜ್ಯದ ಅಧಿಕಾರಿಗಳೊಂದಿಗೆ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ಬದ್ಧತೆ ಕುರಿತು, ಪ್ರಶ್ನಿತ ಸಂಸ್ಥೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರಗಳನ್ನು ಇಲಾಖಾ ಅಧಿಕಾರಿಗಳ ತಂಡ ಪರಿಶೀಲಿಸಿದೆ. ಮೇಲೆ (2)ರಲ್ಲಿ ಓದಲಾದ SLEC ಸಭೆಯಲ್ಲಿ ಈ ಯೋಜನೆಗೆ ತಾಂತ್ರಿಕ ಕಾರ್ಯಸಿಂಧುತ್ವ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ ಅಭಿಪ್ರಾಯ ಪಡೆದು ಅನುಮೋದನೆ ನೀಡಲು ಒಪ್ಪಿಗೆ ದೊರೆತಿದೆ. CE/PRED ಈ ಕುರಿತಂತೆ ಅಗತ್ಯ ಕ್ರಮವಹಿಸಿ, ಯೋಜನೆಗೆ ಮಂಜೂರಾತಿ ನೀಡಲು ಪ್ರಸ್ತಾಪಿಸಿ ಈ ಯೋಜನೆಯ ಉಸ್ತುವಾರಿಗೆ ಅಗತ್ಯವಿರುವ Project Monitoring Unit ಗೊತ್ತುಪಡಿಸಲು, ಟೆಂಡರ್ ಕರೆಯಲು ಅನುಮತಿ ಕೋರಿದ್ದಾರೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 153 ಗ್ರಾನೀಸ(5)2012 ಬೆಂಗಳೂರು, ದಿನಾಂಕ:18.7.2013**

ಪೀಠಿಕೆಯಲ್ಲಿನ ಪ್ರಸ್ತಾವನೆಯನ್ನು ಪರಿಶೀಲ್ಲಿಸಿ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು DBOT ಆಧಾರದ ಮೇಲೆ 5 ವರ್ಷಗಳ O&M ಸೇರಿದಂತೆ ರೂ.150.50ಕೋಟಿ (ಒಂದುನೂರ ಐವತ್ತು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಅಂದಾಜು ವೆಚ್ಚದಲ್ಲಿ M/s. JITF, Water Infrastructure Ltd., New Delhi, ಅವರ ಮುಖೇನ ಅನುಷ್ಠಾನಗೊಳಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. **ಈ ಆದೇಶವು ಕೆಳಕಂಡ ನಿಬಂಧನೆಗಳಿಗೊಳಪಟ್ಟಿರುತ್ತದೆ;**

1. ಈ ಯೋಜನೆಯನ್ನು 12 ತಿಂಗಳೊಳಗಾಗಿ M/s. JITF ಸಂಸ್ಥೆ ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು. ಹಾಗು 5 ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಕಾರ್ಯಾಚರಣೆ ಜವಾಬ್ದಾರಿಯನ್ನು (ವಿದ್ಯುತ್ ಶುಲ್ಕ ಹೊರತುಪಡಿಸಿ) ಸದರಿ ಸಂಸ್ಥೆಯೇ ನೋಡಿಕೊಳ್ಳುವುದು.

.....3

2. ಯೋಜನೆಯ ಅನುಷ್ಠಾನ ಮತ್ತು ಅನುದಾನ ವಿನಿಯೋಗದಲ್ಲಿ ಹೆಚ್ಚಳವಾಗದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಅನುಷ್ಠಾನಾಧಿಕಾರಿಗಳು ಅಗತ್ಯವಿರುವ ಒಡಂಬಡಿಕೆ /ಕರಾರು ಪತ್ರವನ್ನು ಟೆಂಡರ್ ನಿಯಮಗಳನ್ವಯ ಮಾಡಿಕೊಳ್ಳತಕ್ಕದ್ದು.

3. ಕರಾರು ಪತ್ರದನ್ವಯ ಕನಿಷ್ಠ 40 LPCD ಶುದ್ಧ ಕುಡಿಯುವ ನೀರು ಪೂರೈಸಲು ಮತ್ತು ಯಾವುದೇ ಕಾರಣಕ್ಕೂ ಅನುಮೋದಿತ ಯೋಜನಾ ಅಂದಾಜು ವೆಚ್ಚದಲ್ಲಿ ಹೆಚ್ಚಳವಾದಲ್ಲಿ ಸದರಿ ಸಂಸ್ಥೆಯೇ ಅಂತಹ ಹೆಚ್ಚಳ ಭರಿಸಬೇಕು.

4. ಸಂಸ್ಥೆಯು ಸಿದ್ಧಪಡಿಸುವ ತಾಂತ್ರಿಕ ಡಿ.ಪಿ.ಆರ್‌ಗೆ CE/PRED ಹಾಗೂ DBOT ತಾಂತ್ರಿಕ ಸಮಿತಿ ಕರಾರು ಪತ್ರ ಸಹಿ ಮಾಡುವ ಮೊದಲು ಅನುಮೋದಿಸಬೇಕು. ಹೀಗೆ ಅನುಮೋದಿಸುವಾಗ ವಾಸ್ತವಿಕವಾಗಿ ಅಗತ್ಯವಿರುವ ಪ್ರಮಾಣದ ಶುದ್ಧ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಗೆ ಅಗತ್ಯವಿರುವ ಎಲ್ಲಾ ತಾಂತ್ರಿಕ ವಿನ್ಯಾಸಗಳು ಮತ್ತು ಕಾಮಗಾರಿಗಳು ಪೂರಕವಾಗಿರುವುದನ್ನು ದೃಢಪಡಿಸಿಕೊಳ್ಳಬೇಕು.

5. 12 ತಿಂಗಳ ನಂತರ ಯೋಜನೆಯಲ್ಲಿನ ಘಟಕದಲ್ಲಿನ ಸಾಮಗ್ರಿಗಳ ಬೆಲೆ ಹೆಚ್ಚಳಕ್ಕೆ ಅವಕಾಶವಿರುವುದಿಲ್ಲ. ಬಲ್ಕ್ ವಾಟರ್ ಮೀಟರ್‌ಗಳನ್ನು ಎಲ್ಲಾ ಗ್ರಾಮಗಳ OHT ಬಳಿ ಅಳವಡಿಸಬೇಕು. ಮನೆ ಸಂಪರ್ಕ ವ್ಯವಸ್ಥೆಯಡಿ ನೀರು ಪೂರೈಕೆಗಾಗಿ ಮೀಟರಿಂಗ್ ವ್ಯವಸ್ಥೆಯನ್ನು ಸರ್ಕಾರದ O&M ನೀತಿಯನ್ವಯ ಉತ್ತೇಜಿಸಬೇಕು.

6. ಯೋಜನಾ ಅಂದಾಜು ಮೊತ್ತದ ಕನಿಷ್ಠ 10%ನ್ನು ಸಂಸ್ಥೆಯು ಯೋಜನೆ ಕಾರ್ಯಗತಗೊಳಿಸಿ ತೃಪ್ತಿಕರ O&M ವ್ಯವಸ್ಥೆ ನಿರೂಪಿಸುವ ಕಾರ್ಯಕ್ಷಮತೆ ಆಧರಿಸಿ ನಂತರ ಪಾವತಿಸಬೇಕು.

7. ಈ ಯೋಜನೆಯಡಿ ಲಗತ್ತಿಸಿರುವ ಅಂದಾಜು ಘೋಷ್ವಾರೆಯಂತೆ ಮುಖ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ನಂತರ, ಅವುಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಮತ್ತು PMC ವರದಿ ಆಧರಿಸಿ ಅನುಮೋದಿತ ToR ಹಾಗೂ ಟೆಂಡರ್ ಕರಾರಿನಂತೆ ನಿಯಮಾನುಸಾರ ಬಿಲ್ ಪಾವತಿಸಲು ಅನುಷ್ಠಾನಾಧಿಕಾರಿಗಳು ಹಾಗು CE/PRED ಕ್ರಮವಹಿಸಬೇಕು. ಕಾಮಗಾರಿಯ ಕಾಲಕಾಲಿಕ ಪ್ರಗತಿ ಮತ್ತು ಗುಣಮಟ್ಟ ಪರಿಶೀಲಿಸಿ ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ ವರದಿ ಮಾಡತಕ್ಕದ್ದು.

8. ಈ ಯೋಜನೆಯನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸುವುದು ಮತ್ತು ಯೋಜನೆಯ ಕಾಮಗಾರಿಗಳ ಗುಣಮಟ್ಟ ಪರಿವೀಕ್ಷಣೆ ಸಲುವಾಗಿ ಅಗತ್ಯವಿರುವ ಯೋಜನಾ ಉಸ್ತುವಾರಿ ಘಟಕವನ್ನು ಟೆಂಡರ್ ಮುಖೇನ ಗೊತ್ತುಪಡಿಸಿ, ಸರ್ಕಾರದ ಅನುಮೋದನೆ ಪಡೆಯಲು ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ ಕ್ರಮವಹಿಸಬೇಕು.

9. 5 ವರ್ಷಗಳ ನಿರ್ವಹಣೆ ಸೇರಿದಂತೆ ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ.150.50ಕೋಟಿಗಳನ್ನು NRDWPಯಡಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ 50:50 ಅನುಪಾತದಲ್ಲಿ ಭರಿಸಲು ಸಂಬಂಧಿಸಿದ ಜಿಲ್ಲಾ ಪಂಚಾಯತ್ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಕ್ರಮವಹಿಸಬೇಕು. ಅಗತ್ಯವಿರುವ ಅನುದಾನದ ಬೇಡಿಕೆಯನ್ನು 2013–14 ಸಾಲಿನ ಕ್ರಿಯಾ ಯೋಜನೆಯಡಿ ಅಳವಡಿಸಬೇಕು.

......4

3. ಈ ಆದೇಶವನ್ನು SLEC ಸಭಾನಡವಳಿ ದಿನಾಂಕ:15.3.2013 ಹಾಗೂ IFA/RDPRರವರ ಸಹಮತಿ ಸಂಖ್ಯೆ: 67/2013-14 ದಿನಾಂಕ:16.7.2013 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
18/7/13

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
9. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-1.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ಅಭಯ ಸಂಕೀರ್ಣ, 4ನೇ ಮಹಡಿ, ನಂ.55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರ, ಬೆಂಗಳೂರು-20.
12. ಜಿಲ್ಲಾ ಪಂಚಾಯತ್ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾಸನ,
13. ಮುಖ್ಯ ಲೆಕ್ಕಾಧಿಕಾರಿಗಳು, ಹಾಸನ ಜಿಲ್ಲಾ ಪಂಚಾಯತ್, ಹಾಸನ
14. ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಅಧೀಕ್ಷಕ ಅಭಿಯಂತರು, ಮೈಸೂರು.
15. ಹಾಸನ/ಚನ್ನರಾಯಪಟ್ಟಣ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್ PRED ಕಛೇರಿ, ಬೆಂಗಳೂರು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
18. ನಿರ್ದೇಶಕರು, KRWSSA ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಅಪರ ನಿರ್ದೇಶಕರು, ಆರ್ಥಿಕ – KRWSSA , RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
19. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ವ್ಯವಸ್ಥಾಪಕರು, ಮೆ॥ JITF, ಜಿಂದಾಲ್ ಸಂಸ್ಥೆ, ಶಿವಾಜಿ ಮಾರ್ಗ್, ನ್ಯೂ ಡೆಲ್ಲಿ.
21. ಸಿಂಡಿಕೇಟ್ ಬ್ಯಾಂಕ್, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 153 ಗ್ರಾನೀಸ(5)2012 ಬೆಂಗಳೂರು, ದಿ:18.7.2013ರ

ಲಗತ್ತು ಅನುಬಂಧ-1 / Annexure-1

ಅರಸೀಕೆರೆ ತಾಲ್ಲೂಕಿನ MVS ಯೋಜನೆಯ ಮುಖ್ಯ ಕಾಮಗಾರಿಗಳ ಅಂದಾಜು ಘೋಷ್ವಾರೆ

| Sl. No | Parameters | Amount as per Line estimate of 2007-08 CSR **(Rs. in Lakhs)** |
|---|---|---|
| 1 | Head works | 20.00 |
| 2 | Impounding Reservoir | 484.51 |
| 3 | Raw Water Rising Main & Pumping Machinery | 1176.74 |
| 4 | Water Treatment Plant | 231.00 |
| 5 | Pure Water Rising Main & Pumping Machinery | 6304.36 |
| 6 | Express Feeder Line | 25.00 |
| 7 | Land Acquisition | 30.00 |
| 8 | Contingency | 413.39 |
| | **TOTAL** | **8685.09 OR Rs.87Crore** |

| Sl. No | Parameters | Amount as per **DBOT** estimate, based on **CSR 2011-12 Rs.in Lakhs** | Remarks |
|---|---|---|---|
| 1 | Administrative Approval (year 2008) | 8685.09 | Approved amount |
| 2 | Deletion value of heads which are not applicable | 897.90 | Deleted IR of ₹484.51 lakhs & Contingency ₹413.39 lakhs |
| 3 | Revised approved amount | 7787.19 | Sl.No.1 – Sl.No.2 |
| 4 | Rationalizing 2007 SR to CSR | 2336.16 | Considered 30% as against actuals of over 35% |
| 5 | Add required component that are missing | 2186.00 | WTP 1.47 MLD = 59, Head works=105, Express Feeder Main = 3, SCADA = 150, Intermediate Sump = 71, MBT = 207, Staff quarters = 214, Gravity Main (45 Kms) = 1080 |
| 6 | Net Cost | 12309.35 | Sl.No.(3 + 4 + 5) |
| 7 | DPR Cost | 271.00 | Considered is only ₹2.71 Crores. General practice of 2% of contract value i.e., 2% of ₹150.50 Crores=Rs.3.01 Crores |
| 8 | O & M Cost | 2000.00 | Excluding Energy costs for 5 Years |
| | **TOTAL** | 14580.35* **OR** Rs.146Crore | Sl.No.(6 + 7 + 8) *excludes tender premium. |

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ